# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017;(ಗೈಡ್ ವಿಭಾಗ) +91-80-2226 7470;ಫ್ಯಾಕ್ಸ್; +91-80-2226 1047

ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org


**ಸಂಖ್ಯೆ: ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/459/2026-27** **ದಿನಾಂಕ:16.06.2026**

**ಜಿಲ್ಲಾ ಕಾರ್ಯದರ್ಶಿಗಳು**
**ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್**
**ಜಿಲ್ಲಾ ಸಂಸ್ಥೆ, ಶಿವಮೊಗ್ಗ ಜಿಲ್ಲೆ**

**ಮಾನ್ಯರೆ,**

**ವಿಷಯ:-** ಯುವ ಆಪದ್ ಮಿತ್ರ ಯೋಜನೆಯ ಅಂಗವಾಗಿ ವಿಪತ್ತು ನಿರ್ವಹಣಾ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ತಮ್ಮ ಜಿಲ್ಲೆಯ ಆಸಕ್ತ ರೋವರ್ಸ್-ರೇಂಜರ್ಸ್‌ಗಳನ್ನು ನಿಯೋಜಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ, ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಬೆಂಗಳೂರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ಸಹಕಾರದೊಂದಿಗೆ "ಯುವ ಆಪದ್ ಮಿತ್ರ ಯೋಜನೆಯ ಅಡಿಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ **ಶಿವಮೊಗ್ಗ ಜಿಲ್ಲೆಯ 150 ರೋವರ್ಸ್-ರೇಂಜರ್ಸ್ ಸ್ವಯಂಸೇವಕರುಗಳಿಗೆ** ವಿಪತ್ತು ನಿರ್ವಹಣಾ ತರಬೇತಿ ಶಿಬಿರವನ್ನು ದಿನಾಂಕ: 20 ರಿಂದ 26 ಜೂನ್ 2026ರ ವರೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ, ಬಿ.ಹೆಚ್.ರಸ್ತೆ, ಶಿವಮೊಗ್ಗ ಜಿಲ್ಲೆ ಇಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದ ವಿವರಗಳು ಈ ಕೆಳಕಂಡಂತಿವೆ.

| | |
|---|---|
| ಶಿಬಿರ | ವಿಪತ್ತು ನಿರ್ವಹಣಾ ತರಬೇತಿ ಶಿಬಿರ |
| ದಿನಾಂಕ | 20 ರಿಂದ 26 ಜೂನ್ 2026ರ ವರೆಗೆ |
| ಸ್ಥಳ | ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ, ಬಿ.ಹೆಚ್.ರಸ್ತೆ, ಶಿವಮೊಗ್ಗ ಜಿಲ್ಲೆ |
| ನೊಂದಾವಣಿ ದಿನಾಂಕ & ಸಮಯ | 20.06.2026 ರಂದು ಬೆಳಗ್ಗೆ 8.00 ಗಂಟೆಗೆ ಹಾಜರಾಗುವುದು. **ಬಿಎಸ್‌ಜಿ ಯುಐಡಿ ಹಾಗೂ ಮೈ ಭಾರತ್ ಐ.ಡಿ. ಕಡ್ಡಾಯವಾಗಿರುತ್ತದೆ** |
| ಬಿಡುಗಡೆ ದಿನಾಂಕ | 26.06.2026 ರಂದು ಸಂಜೆ 6 ಗಂಟೆಗೆ |
| ಭಾಗವಹಿಸುವ ಜಿಲ್ಲೆಗಳು | ಶಿವಮೊಗ್ಗ ಜಿಲ್ಲೆಯ 150 ರೋವರ್ಸ್-ರೇಂಜರ್ಸ್‌ಗಳು |
| ಯಾರು ಭಾಗವಹಿಸುವುದು. | 18 ರಿಂದ 40 ವರ್ಷದ ಒಳಗಿನ ವಯೋಮಿತಿಯಲ್ಲಿರುವ ಉತ್ತಮ ದೈಹಿಕ, ಮಾನಸಿಕ, ಭಾವನಾತ್ಮಕ, ಸದೃಢ ಮತ್ತು ಆರೋಗ್ಯವಾಗಿರುವ ರೋವರ್ಸ್, ರೇಂಜರ್ಸ್ ಹಾಗೂ ದಳನಾಯಕರುಗಳು. ಸ್ವಯಂ ಸೇವಕರು ಅದೇ ಜಿಲ್ಲೆಯ ನಿವಾಸಿಯಾಗಿರಬೇಕು. |
| ತರಬೇಕಾದ ಸಾಮಾಗ್ರಿಗಳು | ಶಿಬಿರಕ್ಕೆ ಅವಶ್ಯಕವಿರುವ ಉಡುಪು ಮತ್ತು ಸಲಕರಣೆಗಳು. ಸಮವಸ್ತ್ರ ಅಥವಾ ಬದಲಿ ಉಡುಪು, ತಟ್ಟೆ, ಲೋಟ, ಹಗುರ ಹಾಗೂ ಬೆಚ್ಚನೆ ಹಾಸಿಗೆ, ನೂಲಿನ ಹಗ್ಗ, ಬರವಣಿಗೆ ಸಾಮಾಗ್ರಿಗಳು, ವೈಯಕ್ತಿಕ ವಸ್ತುಗಳು, ನೋಟ್ ಪುಸ್ತಕ, ಶಿಬಿರಾಗ್ನಿ ಉಡುಪು, 3 ಪಾಸ್‌ಪೋರ್ಟ್ ಫೋಟೋ. |
| ಆನ್‌ಲೈನ್‌ನಲ್ಲಿ ನೊಂದಾವಣಿ | https://forms.zohopublic.in/communication/form/BSGYAMSShivamoggaDistrictPhaseIIIKSNUAHS20thto26th/formperma/doj2xH39l-o-fOYXS5fwZJWxhGtbLiqXwlbLfPPJJCk |

.........2

| | |
|---|---|
| ತರಬೇತಿ ಶಿಬಿರದಲ್ಲಿ ವ್ಯವಸ್ಥೆ | ತರಬೇತಿ ಶಿಬಿರದಲ್ಲಿ ಊಟೋಪಚಾರ ಹಾಗೂ ವಸತಿ ವ್ಯವಸ್ಥೆಯನ್ನು ಉಚಿತವಾಗಿ ಕಲ್ಪಿಸಲಾಗಿದೆ. ಯಾವುದೇ ಶಿಬಿರ ಶುಲ್ಕ ಇರುವುದಿಲ್ಲ. |
| ಪ್ರಯಾಣ ವೆಚ್ಚ | ತರಬೇತಿ ಶಿಬಿರಕ್ಕೆ ಹೋಗಿ ಬರುವ ಸಾಮಾನ್ಯ ಬಸ್ಸು/ರೈಲ್ವೆ ನೈಜ ಪ್ರಯಾಣ ವೆಚ್ಚವನ್ನು ರಾಜ್ಯ ಸಂಸ್ಥೆಯಿಂದ ಭರಿಸಲಾಗುವುದು. |

ಮೇಲ್ಕಂಡ ತರಬೇತಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಮತ್ತು ಸ್ವಯಂಸೇವಕರುಗಳಿಗೆ ಮುಂದಿನ 3 ವರ್ಷಗಳ ಕಾಲ ಜಿಲ್ಲಾಡಳಿತ/ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ/ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಇವರುಗಳು ಅಗತ್ಯ ಸಂದರ್ಭಗಳಲ್ಲಿ ವಿಪತ್ತು ನಿರ್ವಹಣೆಯಲ್ಲಿ ಸೇವೆ ಸಲ್ಲಿಸಲು ತಿಳಿಸಿದ ಸಂದರ್ಭಗಳಲ್ಲಿ ಸೇವೆಗೆ ಸಿದ್ಧರಿರಬೇಕು. ತರಬೇತಿ ಹೊಂದಿದವರುಗಳಿಗೆ ಯುವ ಆಪದ್ ಮಿತ್ರ ಯೋಜನೆಯ ವತಿಯಿಂದ ರೂ.10,000/- ಮೊತ್ತದ ತುರ್ತು ಪ್ರತಿಕ್ರಿಯೆ ಕಿಟ್‌ಅನ್ನು ನೀಡಲಿದ್ದಾರೆ ಹಾಗೂ ಮುಂದಿನ 3 ವರ್ಷಗಳ ಕಾಲಾವಧಿಗೆ ಜೀವ ಮತ್ತು ಆರೋಗ್ಯ ವಿಮೆಯಿಂದ ರಕ್ಷಣೆಯನ್ನು ಪಡೆಯಬಹುದು. ಅಲ್ಲದೇ ತರಬೇತಿಯಲ್ಲಿ ಭಾಗವಹಿಸಿದವರಿಗೆ ವಿಶೇಷ ಪ್ರಮಾಣಪತ್ರವನ್ನು ನೀಡಲಾಗುತ್ತಿದ್ದು, ಇದು ಅವರ ಮುಂದಿನ ಭವಿಷ್ಯಕ್ಕೆ ಅನುಕೂಲವಾಗುವುದು.

ಆದ್ದರಿಂದ, ತಮ್ಮ ಜಿಲ್ಲೆಯ ಅರ್ಹ ಮತ್ತು ಆಸಕ್ತಿ ಹೊಂದಿದ ಹೆಚ್ಚು ಹೆಚ್ಚು ರೋವರ್ಸ್-ರೇಂಜರ್ಸ್ ಹಾಗೂ ದಳನಾಯಕರುಗಳನ್ನು ಪ್ರೋತ್ಸಾಹಿಸಿ, ಯುವ ಆಪದ್ ಮಿತ್ರ ಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆ ಯುವಕರು ಮತ್ತು ದಳನಾಯಕರನ್ನು ಪ್ರೇರೇಪಿಸಿ ನಿಯೋಜಿಸಬೇಕಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಭಾಗವಹಿಸುವ ರೋವರ್ಸ್, ರೇಂಜರ್ಸ್ ಹಾಗೂ ದಳನಾಯಕರು ಈ ಮೇಲೆ ತಿಳಿಸಿರುವ ಲಿಂಕ್ ಮೂಲಕ ನೊಂದಣಿ ಮಾಡಿಕೊಳ್ಳುವುದು. ಸಂಘಟಕರು ಹೆಚ್ಚು ಜವಾಬ್ದಾರಿ ತೆಗೆದುಕೊಂಡು ರೋವರ್ಸ್-ರೇಂಜರ್ಸ್‌ಗಳನ್ನು ಮೇಲೆ ತಿಳಿಸಿರುವ ಲಿಂಕ್‌ನಲ್ಲಿ ನೊಂದಾಯಿಸಿಕೊಳ್ಳಲು ಕ್ರಮ ಕೈಗೊಳ್ಳುವುದು.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

**ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ:**

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಶಿವಮೊಗ್ಗ ಜಿಲ್ಲೆ
2. ಜಿಲ್ಲಾ ಆಯುಕ್ತರು(ಸ್ಕೌ/ಗೈ), ಭಾ.ಸ್ಕೌ&ಗೈ, ಶಿವಮೊಗ್ಗ ಜಿಲ್ಲೆ
3. ಎ.ಎಸ್.ಒ.ಸಿ, ಭಾ.ಸ್ಕೌ&ಗೈ, ಶಿವಮೊಗ್ಗ ಜಿಲ್ಲೆ
4. ಕಛೇರಿ ಪ್ರತಿ